## ಹೀಗೊಂದು ಸಲಹೆ

ಕನ್ನಡ ಚಲನಚಿತ್ರಗಳಲ್ಲಿ ಅನೇಕಾನೇಕ ಮಧುರ ಗೀತೆಗಳಿವೆ. ಅವು ಅತ್ಯಂತ ಜನಪ್ರಿಯವೂ ಆಗಿವೆ. ದೂರದರ್ಶನದ 'ಮಧುರ ಮಧುರವೀ...' ಕಾರ್ಯಕ್ರಮದ ಜನಪ್ರಿಯತೆಯೇ ಇದಕ್ಕೊಂದು ಸಾಕ್ಷಿ. ಆದರೆ ಈ ಮಧುರ ಗಾನಗಳನ್ನು ಕೇಳಲು, ನೋಡಲು ಕನ್ನಡಿಗರಿಗೆ ಯಾವುದೇ ವಾಹಿನಿಯಲ್ಲೂ ಅವಕಾಶವಿಲ್ಲದಿರುವುದು ಒಂದು ದೊಡ್ಡ ಕೊರತೆ. ಹಿಂದಿ, ತಮಿಳಿನಲ್ಲಿ ಇಂತಹ ಕಾರ್ಯಕ್ರಮಗಳೇ ಪ್ರಸಾರವಾಗುತ್ತಿದ್ದು ಜನರ ಮನವನ್ನು ತಣಿಸುತ್ತಿವೆ. ಉದಾಹರಣೆಗೆ ಹಿಂದಿಯ 'ಲಮ್ಹೆ', ತಮಿಳಿನ 'ಮರಸು'. ರಾತ್ರಿ ಮಲಗುವ ಮುನ್ನ ಮಧುರವಾದ ಗಾನಗಳನ್ನು ಕೇಳುವುದು ಚೆಂದ. ಸದ್ಯ ಇದಕ್ಕಾಗಿ ನಾವು ತಮಿಳು, ಹಿಂದಿ ವಾಹಿನಿಗಳ ಮೊರೆ ಹೋಗಬೇಕಾಗಿದೆ. ಕನ್ನಡ ವಾಹಿನಿಗಳೂ ಈ ರೀತಿಯ ಕಾರ್ಯಕ್ರಮ ಪ್ರಸಾರ ಮಾಡಿದರೆ ತುಂಬಾ ಚೆನ್ನಾಗಿರುತ್ತದೆ.

—ಎಸ್. ಜ್ಞಾನಸುಂದರ್, ಬೆಂಗಳೂರು

ವಾರದ ಪತ್ರ

## ಕಾರಿನ ಸಂಖ್ಯೆ ನಾಲ್ಕಲ್ಲವೇ?

ತಪ್ಪಾಗೋದು ದೊಡ್ಡ ವಿಚಾರ ಅಲ್ಲ, ಸರಿ ಮಾಡಿಕೊಳ್ಳೋದು ಸಣ್ಣವಿಚಾರಾನೂ ಅಲ್ಲ!

ನಮ್ಮ ಮನೆಮಂದಿಗೆಲ್ಲಾ ಕಲರ್ಸ್ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ 'ಕನ್ನಡತಿ' ಪ್ರೀತಿ ಪಾತ್ರ ಧಾರಾವಾಹಿ. ಅದು ಅತ್ಯುತ್ತಮ ವಾಗಿ ಮೂಡಿಬರುತ್ತಿದೆ. ಈ ಧಾರಾವಾಹಿಯ ಕೊನೆಯಲ್ಲಿ ಕನ್ನಡ ಶಬ್ದಗಳ ಅಪಭ್ರಂಶ ಮತ್ತು ಸರಿಯಾದ ಪ್ರಯೋಗವನ್ನು ತಿಳಿಸಿಕೊಡುವುದೂ ಅಷ್ಟೇ ಸೊಗಸಾಗಿದೆ. ಆದರೆ ಈ ಧಾರಾವಾಹಿಯಲ್ಲೊಂದು ವೈರುಧ್ಯ ಇತ್ತೀಚೆಗೆ ಕಂಡೆ. ಹರ್ಷನಿಗೆ '4ರ ಅಂಕೆ ಆಗಿಬರುವುದಿಲ್ಲ', ಎಂದು ಮನೆಮಂದಿಯೆಲ್ಲ ಹೇಳುತ್ತಾರೆ. ಮೋಜಿನ ಸಂಗತಿ ಏನೆಂದರೆ ಹರ್ಷನ ಕಾರಿನ ಸಂಖ್ಯೆ KA05MS4556.ಇದು ನಿರ್ದೇಶಕರ ಗಮನಕ್ಕೆ ಬಂದಿಲ್ಲವೇ?

—ಗೀತಾ ರಾಮಚಂದ್ರ, ಬೆಂಗಳೂರು

## ಮಕ್ಕಳೂ ನೋಡಲಾಗದ ಧಾರಾವಾಹಿ

ಕನ್ನಡ ಕಲರ್ಸ್‌ನ ಹಲವು ಧಾರಾವಾಹಿಗಳು ಪ್ರಸಾರವಾದವು. ವೀಕ್ಷಕರಿಗೆ ಇಷ್ಟವಾಯಿತೋ ಇಲ್ಲವೋ, ವಾಹಿನಿಯವರಂತೂ ಕ್ಯಾರೆ ಅನ್ನದೆ ಅದನ್ನು ವೀಕ್ಷಕರಿಗೆ ಉಣಬಡಿಸಿದರು. ವೀಕ್ಷಕರು ವಾಕರಿಕೆ ಉಂಟಾದರೂ ನೋಡಿಯೋ ನೋಡದೆಯೋ ಸಹಿಸಿಕೊಂಡರು.

ಈಗ ಪ್ರಸಾರವಾಗುತ್ತಿರುವ 'ಮಂಗಳಗೌರಿ ಮದುವೆ' ಧಾರಾವಾಹಿಯಲ್ಲಿ ನೈಜತೆಯ ಲವಲೇಶವೂ ಇಲ್ಲ. ಇನ್‌ಸ್ಪೆಕ್ಟರ್ ರಾಜೀವನ ತಲೆಯೇ ಮೇಲೆ ಹುವಿನಕುಂಡ ಬಿದ್ದು ನೆನೆಪಿನ ಶಕ್ತಿ ಹೋಗಿರುತ್ತದೆ. ಅವನಿಗೆ ಮನೆಯಲ್ಲಿ ಅಣ್ಣ, ಅತ್ತಿಗೆ, ಬಳ್ಳಿ, ಅಮ್ಮ, ಠಾಣೆಯಲ್ಲಿ ಅವನ ಇಬ್ಬರು ಪೊಲೀಸ್ ಪೇದೆಗಳ ಜ್ಞಾಪಕ ಇರುತ್ತದೆ. ಆದರೆ ಹೆಂಡತಿಯಾದ ಮಂಗಳ ಗೌರಿಯ ಜ್ಞಾಪಕ ಮಾತ್ರ ಇರುವುದಿಲ್ಲ. ಇದು ಹೇಗೆ ಸಾಧ್ಯ?. ಇನ್ನು ಮನೆಯಲ್ಲಿ ಅತ್ತಿಗೆ ಹಾಗೂ ಬಳ್ಳಿಯ ಹಾವಳಿ ಅವನ ಗಮನಕ್ಕೆ ಬರುವುದೇ ಇಲ್ಲ. ಅವರಿಬ್ಬರ ಕಪಿಚೇಷ್ಟೆ ನಿಜಕ್ಕೂ ಸಹಿಸಲು ಅಸಾಧ್ಯ . ಆ ಬಳ್ಳಿಯ ಹಾವಭಾವ ಮೈಕೈ ಕುಣಿಸುವ ರೀತಿ ನಿಜಕ್ಕೂ ಹೇಸಿಗೆ ಮೂಡಿಸುತ್ತದೆ. ರಾಜೀವನ ಅತ್ತಿಗೆಗೆ ಬೇಕಾಗಿರುವುದು ರಾಜೀವನ ಸಾವು ಹಾಗೂ ಮಂಗಳ ಗೌರಿಯನ್ನು ಮನೆಯಿಂದ ಹೊರಗೆ ಹಾಕುವುದು.

—ಎನ್.ಎಸ್.ಚಂದ್ರಶೇಖರ್, ಬೆಂಗಳೂರು

## ಗುಲಾಮಿ ಪದ್ಧತಿ ಅಸ್ತಿತ್ವದಲ್ಲಿಯೇ?

ಇತ್ತೀಚೆಗೆ ಕಲರ್ಸ್ ಕನ್ನಡದಲ್ಲಿ ಪ್ರಸಾರವಾಗುತ್ತಿರುವ 'ಗಿಣಿರಾಮ' ಉತ್ತರ ಕರ್ನಾಟಕದ ಭಾಷೆಯ ಸೊಗಡನ್ನು ಹೊತ್ತುಕೊಂಡು, ಅದರ ಸವಿಯನ್ನು ಉಣಿಸುತ್ತಿದೆ. ಕಥೆಯ ಹಂದರವೇನೋ ಕುತೂಹಲಕಾರಿಯಾಗಿದೆ. ಆದರೆ ಅದರ ತಿರುಳು ಮಾತ್ರ ಮಾಮೂಲಿ ಮಚ್ಚು, ಲಾಂಗು, ರೌಡಿಸಂಗಳೇ. ನೆಂಟರಿಂದ ತುಂಬಿದ ಮನೆಯಲ್ಲಿ ನಾಳೆಯೇ ಮದುವೆ ಇರುವಾಗ ಯಾರಿಗೂ ಗಾಢ ನಿದ್ರೆ ಬರುವುದೇ ಇಲ್ಲ. ಇಂತಿರುವಾಗ ಒಡವೆ ವಸ್ತುಗಳನ್ನೆಲ್ಲ ಮನೆಯಲ್ಲಿಟ್ಟುಕೊಂಡು ಬಾಗಿಲು ಹಾಕದೇ ಮಲಗುತ್ತಾರೆಯೇ? ಹಾಗಿರುವಾಗ ಶಿವರಾಂ ದೇಶಪಾಂಡೆ ಪ್ರವೇಶ ಹೇಗಾಯಿತೋ ಗೊತ್ತಿಲ್ಲ. ಮಲಗಿದ್ದವರನ್ನೆಲ್ಲ ದಾಟಿಕೊಂಡು, ನೇರವಾಗಿ ಮದುಮಗಳ ಕೋಣೆಗೆ ಹೋಗಿ ಮಹತಿಯನ್ನು ಹೊತ್ತೊಯ್ಯುವುದು ಅಸಹಜವಲ್ಲವೇ?

ಇನ್ನು ಸುಂದರಮೂರ್ತಿ ತಮ್ಮ ನೌಕರರನ್ನು ನಡೆಸಿಕೊಳ್ಳುವ ರೀತಿ ಅವಹೇಳನಕಾರಿಯಾಗಿದೆ. ಅವರನ್ನು ನಾಯಿಗಳೆಂದು ಕರೆಯುವುದು, ಅವನ ಆಜ್ಞೆ ಬರುವವರೆಗೂ ಎಲ್ಲರೂ ವ್ಯಾಯಾಮ ಮಾಡುತ್ತಲೇ ಇರಬೇಕೆನ್ನುವುದೂ, ಒಬ್ಬ ಡಿಪ್ಸ್ ತೆಗೆಯುತ್ತಿರುವಾಗ ಅವನ ಬೆನ್ನಿನ ಮೇಲೆ ಡ್ರೈ ಫ್ರುಟ್ಸ್ ತಟ್ಟೆ ಇಟ್ಟು ತಿನ್ನುತ್ತಿರುವುದು ಇವೆಲ್ಲ ಜುಗುಪ್ಸೆ ಹುಟ್ಟಿಸುತ್ತಿದೆ. ಇದನ್ನು ನೋಡುವಾಗ ಒಂದು ಕಾಲದಲ್ಲಿ ಅಸ್ತಿತ್ವದಲ್ಲಿದ್ದ ಗುಲಾಮಿ ಪದ್ಧತಿ ಇನ್ನೂ ಚಾಲ್ತಿಯಲ್ಲಿದೆಯೇನೋ ಎಂಬ ಸಂದೇಹ ಮೂಡುತ್ತಿದೆ. ಜೊತೆಗೆ ಆಯಿಯು ಬಳಸುವ ಪದಗಳು ಖಂಡನೀಯ.

—ಪುಷ್ಪ ಎನ್. ಕೆ. ರಾವ್

## ನ್ಯೂಸ್ ಚಾನೆಲ್‌ಗಳಿಗೆ ಮತ್ತೇರಿದೆಯೇ?

ಆರು ತಿಂಗಳ ಕಾಲ ವೀಕ್ಷಕರಿಗೆ ಕೊರೊನಾಘಾತ ನೀಡಿದ ನ್ಯೂಸ್ ಚಾನೆಲ್‌ಗಳಿಗೆ, ಈಗ ಮಾದಕ ದ್ರವ್ಯಗಳ ಮತ್ತೇರಿದೆ. ತಮ್ಮೆಲ್ಲಾ ಸುದ್ದಿ ಸ್ಫೋಟ, ಮೆಘಸ್ಫೋಟಗಳನ್ನು ಬದಿಗೊತ್ತಿ ಸದಾ ನಟಿಮಣಿಯರ ಮಾದಕದ್ರವ್ಯ ಸೇವನೆ ಬಗೆಗೆ ಕೊರೆಯುತ್ತಿವೆ. ವಾಸ್ತವದ ಅರಿವು ಇಲ್ಲದವರು ಈ ನ್ಯೂಸ್ ವೀಕ್ಷಿಸಿದರೆ, ದೇಶದಲ್ಲಿ ಇದೊಂದೇ ಸುದ್ದಿ ಎನ್ನುವ ಭಾವನೆ ಬರುತ್ತದೆ. ಇದೊಂದು ಸ್ಫೋಟಕ, ಅತಂಕಕಾರಿ ಮತ್ತು ಆಘಾತಕಾರಿ ಸುದ್ದಿ ಎನ್ನುವುದರಲ್ಲಿ ಸಂದೇಹವಿಲ್ಲ. ಆದರೆ, ಅದನ್ನೇ ತಿರುಚಿ ತಿರುಚಿ ಉಪಮೆ ಅಲಂಕಾರಗಳಿಂದ ದಿನವಿಡಿ ಕೊರೆಯುವಷ್ಟು ಆದ್ಯತೆಯ ಸುದ್ದಿಯಲ್ಲ. ಕೊರೊನಾ ಕವರೇಜ್ ಸ್ವಲ್ಪ ಹಿಂದೆ ಸರಿಯುತ್ತಿರುವಂತೆ ಹೋದೆಯಾ ಪಿಶಾಚಿ ಎಂದು ವೀಕ್ಷಕರು ನಿಟ್ಟುಸಿರು ಬಿಡುತ್ತಿರುವಂತೆ, ಬಂದೆಯಾ ಗವಾಕ್ಷಿ ಎನ್ನುತ್ತಾ ಮಾದಕ ದ್ರವ್ಯ ನ್ಯೂಸ್ ಚಾನೆಲ್‌ಗಳಿಗೆ ಒಕ್ಕರಿಸಿದೆ. ಈ ನ್ಯೂಸ್ ಚಾನೆಲ್‌ಗಳ ಅಮಲು ಇಳಿಯಲು ಇನ್ನೆಷ್ಟು ದಿನಗಳು ಬೇಕೋ?

—ರಮಾನಂದಶರ್ಮಾ, ಬೆಂಗಳೂರು

## ಬಿಗ್ ಬಾಸ್‌ಗೊಂದು ಟಾಸ್ಕ್!

ಈ ವರ್ಷ ಕನ್ನಡದ 'ಬಿಗ್ ಬಾಸ್' ನಡೆಯುವುದು ಅನುಮಾನ ಎಂಬ ಸುದ್ದಿಯನ್ನು ಓದಿದೆ. ನಿಜಕ್ಕೂ ಹಾಲು ಕುಡಿದಷ್ಟೇ ಸಮಾಧಾನವಾಯ್ತು. ಒಂದು ವರ್ಷ ಬಿಗ್ ಬಾಸ್ ನಡೆಯದಿದ್ದರೂ ಕನ್ನಡ ಜನರ ಆರೋಗ್ಯ ಅಷ್ಟರಮಟ್ಟಿಗೆ ಸುಸ್ಥಿತಿಯಲ್ಲಿರುತ್ತದೆ. ಮನೆಯೊಳಗೆ ಒಂದಿಷ್ಟು ನಾಟಕ ನೋಡುವುದು ತಪ್ಪುತ್ತದೆ. ರಿಯಾಲಿಟಿ ಶೋ ಮುಗಿದ ಮೇಲೆಯೂ ಎಷ್ಟೋ ವಿವಾದಗಳು ಹುಟ್ಟಿಕೊಳ್ಳುವುದೇ ಇಲ್ಲ.

ಒಂದು ರಿಯಾಲಿಟಿ ಶೋ ನಿಂತರೆ ಎಷ್ಟು ಉಪಯೋಗಗಳಿವೆ ನೋಡಿ. ಅದೇ ವೇಳೆಗೆ ಯಾವುದಾದರೂ ಸದಭಿರುಚಿಯ ಕಾರ್ಯಕ್ರಮಗಳನ್ನು ಪ್ರಸಾರ ಮಾಡಲಿ. ಬೋನೊಳಗೆ ಇಲಿಗಳನ್ನು ಕೂಡಿಹಾಕುವಂತೆ ಸೆಲೆಬ್ರಿಟಿಗಳನ್ನು ಕೂಡಿಹಾಕಿ, ಅಲ್ಲಿ ಕಚ್ಚಾಡುವುದನ್ನು ನೋಡಿ ಮಜಾ ತೆಗೆದುಕೊಳ್ಳುವುದು ಕೀಳು ಅಭಿರುಚಿ. ಬದಲಿಗೆ ಅದೇ ಸೆಲೆಬ್ರಿಟಿಗಳು ಸಮಾಜದಲ್ಲಿ ಸ್ಫೂರ್ತಿಯನ್ನು ಉಂಟು ಮಾಡುವ ಕೆಲಸ ಮಾಡಲಿ. ತಮ್ಮ ಸಾಧನೆಯನ್ನು ಮತ್ತೊಬ್ಬರಿಗೆ ಸ್ಫೂರ್ತಿಯಾಗುವಂತೆ ಮಾಡಲಿ.

'ಬಿಗ್‌ಬಾಸ್' ಇನ್ನೊಂದು ವರ್ಷ ಇದ್ದಲ್ಲಿಯೇ ತಟಸ್ಥವಾಗಿದ್ದು, ತೆಪ್ಪಗಿರುವ ಟಾಸ್ಕ್ ಅನ್ನು ಮುಗಿಸಬೇಕಾಗಿ ಪ್ರೇಕ್ಷಕವರ್ಗ ಆದೇಶಿಸುತ್ತದೆ... ಎಂದು ನಾನು ಭಾವಿಸುವೆ.

—ಜಗದೀಶ ಪಿ. ಕೆ., ಸಾಗರ